	ಪುರೋಹಿತ್ ಸಂಘ.
51	ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾ: ಹುಳಿಯಾರ್ ಗ್ರಾಮದಲ್ಲಿ ಜಾಮೀಯಾ ಮಸೀದಿ
52	ಮಂಡ್ಯ ಜಿಲ್ಲೆ, ನಾಗಮಂಗಲ ತಾ: ಶ್ರೀ ವಿಮಲನಾಥ ಸ್ವಾಮಿ ದರ್ಮ ಶಾಲಾ ಕಟ್ಟಡ ಸಮಿತಿ
53	ಕೋಲಾರ ಜಿಲ್ಲೆ, ಬಂಗಾರಪೇಟೆ ತಾ: ಬೇತಮಂಗಲದಲ್ಲಿ ಮಸ್ಜೀದ್ ಇ ಅಜಂ ಸಂಸ್ಥೆ
54	ಬಾಗಲಕೋಟೆ ಜಿಲ್ಲೆ, ಜಮಖಂಡಿ ತಾ: ಅಕ್ಸಮಸೀದಿ
55	ಅಂಜುಮನ್ ಇಸ್ಲಾಂ, ಹುಬ್ಬಳ್ಳಿ, ಶಾದಿಮಹಲ್
56	ಬೆಳಗಾಂ ಜಿಲ್ಲೆ ಚಿಕ್ಕೋಡಿ ತಾಲ್ಲೂಕು, ಚಿಕ್ಕೋಡಿಯ ಝೂರಿ ಗಲ್ಲಿಯಲ್ಲಿ ಜಾಮಾ ಮಸ್ಜೀದ್
57	ಬೆಳಗಾಂ ಜಿಲ್ಲೆ ಚಿಕ್ಕೋಡಿ ತಾಲ್ಲೂಕು, ಮಾಂಜರಿಯ ಸುನ್ನಿ ಅಮೀರ ಜಮಾತ್ ಜಾಮೀಯಾ ಮಸ್ಜೀದ್ ಕಮಿಟಿ
58	ಬೆಳಗಾಂ ಜಿಲ್ಲೆ ಚಿಕ್ಕೋಡಿ ತಾಲ್ಲೂಕು, ಕಾಡಾಪುರ ಗ್ರಾಮದಲ್ಲಿ ಮುಸ್ಲಿಂ ಜಮಾತ್
59	ಬೆಳಗಾಂ ಜಿಲ್ಲೆ ಚಿಕ್ಕೋಡಿ ತಾಲ್ಲೂಕು, ಖಿಡಕಲಾಟ ಗ್ರಾಮದಲ್ಲಿ ಸುನ್ನತ್ ಮುಸ್ಲಿಂ ಜಮಾತ್
60	ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು ಒಕ್ಕೆತ್ತೂರು ಬದ್ರಿಯಾ ಜುಮ್ಮ ಮಸ್ಜೀದ್
61	ಮೈಸೂರು ಜಿಲ್ಲೆ, ಟೀ ನರಸೀಪುರ ತಾಲ್ಲೂಕು, ಗರ್ಗೇಶ್ವರಿ ಗ್ರಾಮದಲ್ಲಿ ಸ್ಟೂಡೆಂಟ್ ಫೆಡರೇಷನ್
62	ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು, ಕಲ್ಯಾಣಪುರದಲ್ಲಿ ಮೀಲಾಗ್ರೀಸ್ ಚರ್ಚ್
63	ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು, ಜೋಗ್ ಫಾಲ್ಸ್‌ನಲ್ಲಿ ಜೋಗದ ಸಿರಿ ಸಮಿತಿ

(ಆರ್.ನಿಸಾರ್ ಅಹಮದ್)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.

<u>ಕರ್ನಾಟಕ ವಿಧಾನ ಸಭೆ</u>

375 ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)
ಶ್ರೀ ಡಿ.ಸುಧಾಕರ್, ಮಾನ್ಯ ಸಮಾಜ ಕಲ್ಯಾಣ ಸಚಿವರು

ಅ) ರಾಜ್ಯದಲ್ಲಿರುವ ಕೆಲವು ಹಿಂದುಳಿದ ಜನಾಂಗದ ಸಂಘ ಸಂಸ್ಥೆಗಳಿಗೆ ಸರ್ಕಾರವು ಸಹಾಯ ಧನ ಯೋಜನೆಯನ್ನು ಪ್ರಕಟಿಸಿರುವುದು ನಿಜವಲ್ಲವೇ: ಈ ಯೋಜನೆಯ ಉದ್ದೇಶಗಳೇನು;

ಹೌದು,

ದೇವಾಂಗ, ಕುಂಬಾರ, ಕಂಬಾರ, ಮಡಿವಾಳ, ಕ್ಷತ್ರಿಯ ಮುಂತಾದ ಅತೀ ಹಿಂದುಳಿದ ಜನಾಂಗದ ಸಂಘ ಸಂಸ್ಥೆಗಳಿಗೆ ಸಹಾಯಧನ ಯೋಜನೆಯನ್ನು ಪ್ರಕಟಿಸಿರುತ್ತದೆ. ಈ ಯೋಜನೆಯಡಿ ಸದರಿ ಹಿಂದುಳಿದ ವರ್ಗಗಳ ಸಂಘ ಸಂಸ್ಥೆಗಳು ನಿರ್ಮಿಸುವ ಸಮುದಾಯ ಭವನ/ವಿದ್ಯಾರ್ಥಿ ನಿಲಯ ಕಟ್ಟಡಗಳಿಗೆ ಸಹಾಯಧನವನ್ನು ಮಂಜೂರು ಮಾಡಲಾಗುತ್ತದೆ. ಇದಲ್ಲದೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ಮೂಲಕ ವಿವಿಧ ಯೋಜನೆಗಳನ್ನು ರೂಪಿಸಿ ಆರ್ಥಿಕ ಸಹಾಯಧನವನ್ನು ಸಹ ನೀಡಲಾಗುತ್ತಿದೆ. ಇದಲ್ಲದೆ ಸವಿತಾ ಸಮಾಜ ಮತ್ತು ಉಪ್ಪಾರ ಸಮಾಜದ ಜನಾಂಗದವರ ಅಭಿವೃದ್ಧಿಗೆ ಪ್ರತ್ಯೇಕವಾಗಿ ಅನುದಾನವನ್ನು ನಿಗದಿಪಡಿಸಿದ್ದು, ಈ ಕಾರ್ಯಕ್ರಮಗಳಡಿಯಲ್ಲಿ ವಿದ್ಯಾರ್ಥಿ ವೇತನ ಮಂಜೂರಾತಿ, ವಿದ್ಯಾರ್ಥಿ ನಿಲಯಕ್ಕೆ ಬೋಜನಾ ವೆಚ್ಚದ ನೀಡಿಕೆ, ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ/ಸಮುದಾಯ ಭವನ ನಿರ್ಮಾಣಕ್ಕೆ ಸಹಾಯಧನ ನೀಡಿಕೆ ಹಾಗೂ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ತರಬೇತಿ ಯೋಜನೆಗಳು, ಸಾಲ ಸೌಲಭ್ಯ ನೀಡಿಕೆ ಮುಂತಾದ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತದೆ.

ಆ) ಹಾಗಿದ್ದಲ್ಲಿ, ಈ ಸಹಾಯಧನವನ್ನು ಪಡೆದುಕೊಳ್ಳಲು ಯಾವ ಯಾವ ಅರ್ಹತೆಗಳನ್ನು ಹೊಂದಿರಬೇಕು;

ಸಮುದಾಯ ಭವನ ಮತ್ತು ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣಕ್ಕೆ ಸಹಾಯಧನವನ್ನು ಮಂಜೂರು ಮಾಡಲು ಕೆಲವು ನಿಬಂಧನೆಗಳನ್ನು ನಿಗಧಿಪಡಿಸಿದ್ದು, ಅದರ ವಿವರಗಳನ್ನು ಅನುಬಂಧ "ಅ" ನಲ್ಲಿ ಲಗತ್ತಿಸಿದೆ.

ಇ) ಈ ಯೋಜನೆಯಡಿಯಲ್ಲಿ ಸಹಾಯ ಧನವನ್ನು ಕೋರಿ ವಿವಿಧ ಜಿಲ್ಲೆಗಳಿಂದ ಸರ್ಕಾರಕ್ಕೆ ಬಂದಿರುವ ಮನವಿಗಳೆಷ್ಟು;

ಸಹಾಯ ಧನವನ್ನು ಕೋರಿಬಂದಿರುವ ವಿವರಗಳನ್ನು ಅನುಬಂಧ "ಆ" ನಲ್ಲಿ ಒದಗಿಸಿದೆ.

ಈ) ಈ ಪೈಕಿ ಯಾವ ಯಾವ ಸಂಘ ಸಂಸ್ಥೆಗಳಿಗೆ ಎಷ್ಟೆಷ್ಟು ಸಹಾಯ ಧನವನ್ನು ಸರ್ಕಾರವು ನೀಡಿದೆ. (ಈ ಸಂಘ ಸಂಸ್ಥೆಗಳ ಹೆಸರು ಮತ್ತು ಇವುಗಳಿಗೆ ನೀಡಿರುವ ಸಹಾಯಧನದ ಮೊತ್ತದ ವಿವರಗಳನ್ನು ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು);

1) ಉಪ್ಪಾರ ಸಮಾಜ ಅಭಿವೃದ್ಧಿಗೆ ರೂ.500.00ಲಕ್ಷ

2) ಸವಿತಾ ಸಮಾಜ ಅಭಿವೃದ್ಧಿಗೆ ರೂ.301.50ಲಕ್ಷ

3) ವಿವಿಧ ಸಮುದಾಯ ಅಭಿವೃದ್ಧಿಗೆ ರೂ.1000.00ಲಕ್ಷ

ಮೇಲ್ಕಂಡ ಯೋಜನೆಯಡಿ ವಿವಿಧ ಸಮುದಾಯಗಳಿಗೆ ಸಹಾಯಧನವನ್ನು ಮಂಜೂರು ಮಾಡಿ ಸಂಬಂಧ ಪಟ್ಟ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾದ ಅನುದಾನದ ವಿವರಗಳನ್ನು ಅನುಬಂಧ "ಇ" ನಲ್ಲಿ ಒದಗಿಸಿದೆ.

ಊ) ಈ ಯೋಜನೆಯನ್ನು ಸಮಾಜದ ಎಲ್ಲಾ ವರ್ಗಗಳಿಗೂ ವಿಸ್ತರಿಸಲು ಸರ್ಕಾರವು ಯೋಚಿಸಿದೆಯೇ; ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಹೌದು, ಸರ್ಕಾರವು ಈ ಯೋಜನೆಯನ್ನು ಅತೀ ಹಿಂದುಳಿದ ವರ್ಗಗಳ ಜನಾಂಗದವರಿಗಾಗಿಯೇ ಜಾರಿಗೊಳಿಸಲು ರೂಪಿಸಲಾಗಿರುತ್ತದೆ.

ಸಕಇ 84 ಬಿಎಂಎಸ್ 09

ಸಹಿ/
(ಡಿ.ಸುಧಾಕರ್)
ಸಮಾಜ ಕಲ್ಯಾಣ ಸಚಿವರು.

(ಎಂ.ಎಂ.ಬಾಟೆ)
ಸರ್ಕಾರದ ಅಧೀನ ಕಾರ್ಯದರ್ಶಿ–3
ಸಮಾಜ ಕಲ್ಯಣ ಇಲಾಖೆ.

ಅನುಬಂಧ–ಅ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

1. ವಿವಿಧ ಸಮುದಾಯಗಳಿಗೆ ಸಮುದಾಯ ಭವನ/ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣಕ್ಕೆ, ಸಹಾಯಧನ ಕಾರ್ಯಕ್ರಮದ ನಿಬಂಧನೆಗಳು:–

1. ಈ ಕಾರ್ಯಕ್ರಮದಡಿ ಅನುದಾನ ಪಡೆಯಲು ಕುಂಬಾರ, ಕ್ಷತ್ರಿಯ, ಮಡಿವಾಳ, ಕಂಬಾರ, ದೇವಾಂಗ ಸಮಾಜಕ್ಕೆ ಸೇರಿದ ನೊಂದಾಯಿತ ಸ್ವಯಂ ಸೇವಾ ಸಂಸ್ಥೆಗಳು ಮಾತ್ರ ಅರ್ಹವಿರುತ್ತವೆ.

2. ಅನುದಾನ ಪಡೆಯುವ ಸಂಸ್ಥೆಯು ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಸಹಕಾರಿ ಸಂಘಗಳ ನೊಂದಣಿಯ ನಿಯನಗಳನ್ವಯ ನೊಂದಾಯಿತ ಸಂಸ್ಥೆಯಾಗಿರಬೇಕು.

3. ಸರ್ಕಾರದ ವತಿಯಿಂದ ನೀಡಲಾಗುವ ಅನುದಾನವು ಉದ್ದೇಶಿತ ಕಟ್ಟಡದ ಅಂದಾಜು ವೆಚ್ಚದ ಶೇಕಡಾ 50ರಷ್ಟು ಇದ್ದು ಗರಿಷ್ಟ 5.00ಲಕ್ಷಕ್ಕೆ ಸೀಮಿತವಾಗಿರುತ್ತದೆ. ಬಾಕಿ ಮೊತ್ತವನ್ನು ಸ್ವಯಂ ಸೇವಾ ಸಂಸ್ಥೆಗಳೇ ಭರಿಸಬೇಕು. ಯಾವುದೇ ರೀತಿಯಲ್ಲಿಯೂ ಹೆಚ್ಚುವರಿ ಅನುದಾನಕ್ಕೆ ಸಂಸ್ಥೆಗಳು ಸರ್ಕಾರವನ್ನು ಕೋರತಕ್ಕದ್ದಲ್ಲ.

4. ಅನುದಾನ ಬಯಸುವ ಸ್ವಯಂ ಸೇವಾ ಸಂಸ್ಥೆಗಳು ಉದ್ದೇಶಿಸಿರುವ ಕಟ್ಟಡ ನಿರ್ಮಾಣಕ್ಕೆ ತಮ್ಮ ಸಂಸ್ಥೆಯ ಹೆಸರಿನಲ್ಲಿ ಜಮೀನು / ನಿವೇಶನವನ್ನು ಹೊಂದಿರಬೇಕು ಅಥವಾ ಇತರೆ ಸರ್ಕಾರಿ/ಸರ್ಕಾರೇತರ ಸಂಸ್ಥೆಗಳಿಂದ ಕನಿಷ್ಠ 30 ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಗೆ ಭೋಗ್ಯಕ್ಕೆ ಪಡೆದಿರಬೇಕು.

5. ಅನುದಾನವನ್ನು ಜಿಲ್ಲೆಯ ಜಿಲ್ಲಾಧಿಕಾರಿಗಳ ಮೂಲಕ ಬಿಡುಗಡೆ ಮಾಡಲಾಗುವುದು. ಜಿಲ್ಲಾಧಿಕಾರಿಯವರು ಅನುದಾನವನ್ನು ಸಂಸ್ಥೆಗಳಿಗೆ ಮರು ಬಿಡುಗಡೆ ಮಾಡುವ ಮುನ್ನ ಕಟ್ಟಡದ ಪ್ರಗತಿಯನ್ನು ಆಧರಿಸಿ 3 ಹಂತಗಳಲ್ಲಿ ಬಿಡುಗಡೆ ಮಾಡತಕ್ಕದ್ದು. (ತಳಪಾಯದ ಹಂತ, ಮೇಲ್ಚಾವಣಿ ಮತ್ತು ಮುಕ್ತಾಯದ ಹಂತದಲ್ಲಿ 40:40:20ರಂತೆ)

6. ಸಮುದಾಯ ಭವನ/ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ ಮೊದಲನೇ ಕಂತಿನ ಅನುದಾನ ಪಡೆದ ದಿನಾಂಕದಿಂದ 2 ವರ್ಷಗಳೊಳಗಾಗಿ ನಿರ್ಮಾಣವನ್ನು ಪೂರ್ಣಗೊಳಿಸತಕ್ಕದ್ದು. 2 ವರ್ಷಗಳೊಳಗಾಗಿ ಕಟ್ಟಡ ನಿರ್ಮಿಸಿದ್ದಲ್ಲಿ, ಮಂಜೂರು ಮಾಡಿದ ಹಣವನ್ನು ಶೇಕಡ 18ರ ಬಡ್ಡಿಯ ಮೇಲೆ ವಸೂಲು ಮಾಡಲಾಗುವುದು. ಕಟ್ಟಡ ನಿರ್ಮಾಣಕ್ಕೆ ಹೆಚ್ಚುವರಿ ಕಾಲಾವಕಾಶವನ್ನು ನೀಡಲಾಗುವುದಿಲ್ಲ.

7. ಸರ್ಕಾರದ ಅನುದಾನದಿಂದ ನಿರ್ಮಿತವಾದ ಸಮುದಾಯ ಭವನ/ವಿದ್ಯಾರ್ಥಿ ನಿಲಯದ ಕಟ್ಟಡವನ್ನು ಹಿಂದುಳಿದ ವರ್ಗಗಳಿಗೆ ಸೇರಿದ ಇತರೆ ಸಮುದಾಯದವರಿಗೂ ಸಹ ಸಾಮಾಜಿಕ ಚಟುವಟಿಕೆಗಳಿಗೆ ಅಗತ್ಯವಿದ್ದಲ್ಲಿ ರಿಯಾಯಿತಿ ದರದಲ್ಲಿ ನೀಡತಕ್ಕದ್ದು.

8. ಸರ್ಕಾರದ ಅನುದಾನದಿಂದ ನಿರ್ಮಿತವಾದ ಸಮುದಾಯ ಭವನ/ವಿದ್ಯಾರ್ಥಿ ನಿಲಯದ ಕಟ್ಟಡಗಳನ್ನು ರಾಜಕೀಯ ಚಟುವಟಿಕೆಗಳಿಗೆ ಉಪಯೋಗಿಸಬಾರದು.

9. ಕುಂಬಾರ, ಕ್ಷತ್ರಿಯ, ಮಡಿವಾಳ, ಕಂಬಾರ, ದೇವಾಂಗ ಸಮುದಾಯ ಭವನ/ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಪಡೆಯುವ ಸಂಸ್ಥೆಗಳು ಕಟ್ಟಡದ ನಕ್ಷೆಗೆ ಸ್ಥಳೀಯ ನಗರಸಭೆ/ಪುರಸಭೆ/ಪಂಚಾಯ್ತಿಯಿಂದ ಅನುಮೋದನೆ ಮತ್ತು ಪರವಾನಗಿ ಪಡೆದಿರಬೇಕು ಹಾಗೂ ಅಂದಾಜು ಪಟ್ಟಿಯು ಅಂಗೀಕೃತ ಅಭಿಯಂತರರಿಂದ ತಯಾರಿಸಲ್ಪಟ್ಟಿರಬೇಕು.

10. ಹಿಂದುಳಿದ ವರ್ಗಗಳಿಗೆ ಸಮುದಾಯ ಭವನ/ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣ ವೆಚ್ಚದ ಅಂದಾಜು ಕನಿಷ್ಠ ರೂ.10.00 ಲಕ್ಷಗಳಿರಬೇಕು. ಇದಕ್ಕೆ ಮೇಲ್ಪಟ್ಟು ಅಂದಾಜು ವೆಚ್ಚ ಇದ್ದಲ್ಲಿ ಸದರಿ ಸಂಸ್ಥೆಯೇ ಹೆಚ್ಚುವರಿ ಹಣವನ್ನು ಭರಿಸತಕ್ಕದ್ದು.

11. ಒಂದು ಸಂಘ ಅಥವಾ ಸಂಸ್ಥೆಯು ಒಂದೇ ಬಾರಿ ಮಾತ್ರ ಅನುದಾನಕ್ಕೆ ಅರ್ಹವಾಗಿರುತ್ತದೆ.

12. ಅನುದಾನ ಪಡೆಯಲಿಚ್ಛಿಸುವ ಸ್ವಯಂ ಸೇವಾ ಸಂಸ್ಥೆಗಳು ಈ ಕೆಳಕಂಡ ದಾಖಲಾತಿಗಳೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು. ಜಿಲ್ಲಾಧಿಕಾರಿಗಳು ಅರ್ಜಿ ಹಾಗೂ ಇತರೆ

ದಾಖಿಲಾತಿಗಳನ್ನು ಮತ್ತು ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಿ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳ ಮೂಲಕ ಸ್ಥಳ ಪರಿಶೀಲನೆ ನಡೆಸಿ ಪ್ರಸ್ತಾವನೆಯನ್ನು ಆಯುಕ್ತರು / ನಿರ್ದೇಶಕರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಸಲ್ಲಿಸಬೇಕು.

ಆಯುಕ್ತರು /ನಿರ್ದೇಶಕರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಜಿಲ್ಲಾಧಿಕಾರಿಗಳಿಂದ ಸ್ವೀಕರಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿ ಸಹಾಯಧನ ಮಂಜೂರು ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದು.

ದಾಖಿಲಾತಿಗಳು:–

1. ನಿಗದಿತ ನಮೂನೆಯಲ್ಲಿ ಅರ್ಜಿ
2. ಸಂಸ್ಥೆಯ ನೋಂದಣಿ ಪ್ರಮಾಣ ಪತ್ರ
3. ಸಂಸ್ಥೆಯ ಬೈಲಾ ಪ್ರತಿ
4. ಸರ್ಕಾರದಿಂದ ಅನುದಾನ ಪಡೆಯುವ ಬಗ್ಗೆ ಸಂಸ್ಥೆಯ ನಡುವಳಿಗಳು
5. ಸಂಸ್ಥೆಯ ಆರ್ಥಿಕ ಪರಿಸ್ಥಿತಿಯ ಕುರಿತಂತೆ ಕಳೆದ 2 ವರ್ಷಗಳ ಆಡಿಟ್ ವರದಿ
6. ಸಕ್ಷಮ ಪ್ರಾಧಿಕಾರಿಗಳಿಂದ ದೃಢೀಕರಿಸಿದ ಸಂಸ್ಥೆಯ ಕಾರ್ಯಕಾರಿ ಮಂಡಳಿಯ ಸದಸ್ಯರ ಪಟ್ಟಿ ಮತ್ತು ವಿಳಾಸ
7. ಕಟ್ಟಡದ ನಕ್ಷೆಗೆ (ಮೂಲ ಪ್ರತಿ) ಪುರಸಭೆ / ನಗರಸಭೆ / ಗ್ರಾಮ ಪಂಚಾಯತಿಯಿಂದ ಅನುಮೋದನೆ ಮತ್ತು ಪರವಾನಗಿ ಪಡೆದುಕೊಂಡಿರಬೇಕು ಮತ್ತು ಅಂದಾಜು ಪಟ್ಟಿಯು ಅಂಗೀಕೃತ ಅಭಿಯಂತರರಿಂದ ತಯಾರಿಸಲ್ಪಟ್ಟಿರಬೇಕು.
8. ಅನುದಾನ ಪಡೆಯುವ ಬಗ್ಗೆ ಸಂಸ್ಥೆಯಿಂದ ಉದ್ದೇಶಿತ ಕಾರ್ಯಕ್ಕೆ ಮಾತ್ರ ಹಣ ಉಪಯೋಗ ಮಾಡುವ ಬಗ್ಗೆ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರ.
9. ಜಿಲ್ಲಾಧಿಕಾರಿಗಳಿಂದ ಶಿಫಾರಸ್ಸು ಮಾಡಿದ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳ ತನಿಖಾ ವರದಿ.
10. ಸಂಸ್ಥೆಯು ಕಟ್ಟಡ ನಿರ್ಮಿಸಲು ಪುರಸಭೆ / ನಗರಸಭೆ / ಗ್ರಾಮ ಪಂಚಾಯತಿಯಿಂದ ಅಧಿಕೃತ ಪರವಾನಗಿ ಪಡೆದ ಬಗ್ಗೆ ದಾಖಿಲಾತಿ.
11. ಸಂಸ್ಥೆಯ ಹೆಸರಿನಲ್ಲಿ ನಿವೇಶನ ಅಥವಾ ಜಮೀನು ಹೊಂದಿರುವ ಖಾತಾ ಪ್ರತಿ/ ಪಹಣಿ ಪ್ರತಿ / ಈವರೆವಿಗೆ ಕಂದಾಯ ಪಾವತಿಸಿರುವ ಬಗ್ಗೆ ರಶೀದಿ ಪ್ರತಿಗಳು.
12. ಸರ್ಕಾರದಿಂದ ಪಡೆಯುವ ಅನುದಾನ ಹೊರತುಪಡಿಸಿ ಅಂದಾಜು ವೆಚ್ಚದ ಬಾಕಿ ಮೊಬಲಗನ್ನು ಭರಿಸುವ ಸಂಬಂಧ ಇರುವ ಆದಾಯದ ಮೂಲಗಳ ವಿವರ.
13. ಸರ್ಕಾರದ ಅನುದಾನ ಪಡೆದು ನಿರ್ಮಿಸಿರುವ ಕುಂಬಾರ, ಕ್ಷತ್ರಿಯ, ಮಡಿವಾಳ, ಕಂಬಾರ, ದೇವಾಂಗ ಸಮುದಾಯ ಭವನ/ವಿದ್ಯಾರ್ಥಿ ನಿಲಯದ ಕಟ್ಟಡವನ್ನು ಇತರೆ ಹಿಂದುಳಿದ ಜನಾಂಗದವರು ಉಪಯೋಗಿಸಲು ಬಯಸಿದ್ದಲ್ಲಿ ರಿಯಾಯಿತಿ ದರದಲ್ಲಿ ನೀಡುವ ಬಗ್ಗೆ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರ.

<u>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ</u>

(ಕುಂಬಾರ, ಕ್ಷತ್ರಿಯ, ಮಡಿವಾಳ, ಕಂಬಾರ, ದೇವಾಂಗ ಸ್ವಯಂ ಸೇವಾ ಸಂಸ್ಥೆಯು ಸಮುದಾಯ ಭವನ/ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಿಸಲು ಅನುದಾನ ನೀಡಿಕೆಗೆ ಸಲ್ಲಿಸಬೇಕಾದ ಅರ್ಜಿ ನಮೂನೆ)

ಗೆ,

ಜಿಲ್ಲಾಧಿಕಾರಿಗಳು

----------ಜಿಲ್ಲೆ

ಮಾನ್ಯರೆ

ವಿಷಯ:- ಸಮುದಾಯ ಭವನ/ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡುವ ಬಗ್ಗೆ

----------ಜಿಲ್ಲೆ----------ತಾಲ್ಲೂಕಿನಲ್ಲಿ ಕರ್ನಾಟಕ ಸರ್ಕಾರದ ಅಧಿಸೂಚನೆಯನ್ವಯ ನೋಂದಣಿಯಾಗಿರುವ----------

----------(ಸಂಸ್ಥೆಯ ಹೆಸರು ಮತ್ತು ವಿಳಾಸ) ಆದ ನಾನು/ ನಾವುಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಸಮುದಾಯ ಭವನ/ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಬೇಕೆಂದು ಕೋರುತ್ತೇನೆ/ವೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮಂಜೂರು ಮಾಡುವ ಬಗ್ಗೆ ರೂಪಿಸಲಾಗಿರುವ ನಿಬಂಧನೆಗಳನ್ನು ಎಚ್ಚರಿಕೆಯಿಂದ ಓದಿರುತ್ತೇನೆ/ವೆ ಮತ್ತು ಪೂರ್ಣವಾಗಿ ಅರ್ಥ ಮಾಡಿಕೊಂಡಿರುತ್ತೇನೆ/ವೆ ಹಾಗೂ ಇವುಗಳನ್ನು ಚಾಚೂ ತಪ್ಪದಂತೆ ಪೂರ್ಣವಾಗಿ ಪಾಲಿಸುತ್ತೇವೆಂದು ಪ್ರಮಾಣೀಕರಿಸುತ್ತೇನೆ/ವೆ.

ಸಮುದಾಯ ಭವನ/ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಿಸುವ ಸ್ವಯಂ ಸೇವಾ ಸಂಸ್ಥೆಯ ಪೂರ್ಣ ವಿವರಗಳು ಈ ಕೆಳಕಂಡಂತಿರುತ್ತವೆ.

ವಿವರಗಳು

1. ಸ್ವಯಂ ಸೇವಾ ಸಂಸ್ಥೆಯ ಪೂರ್ಣ ಹೆಸರು ಮತ್ತು ವಿಳಾಸ	
2. ಸಂಸ್ಥೆಯು ನೋಂದಣೀಯಾದ ವರ್ಷ ಮತ್ತು ಆದೇಶ ಸಂಖ್ಯೆ (ನೋಂದಣಿ ಪ್ರತಿ ಲಗತ್ತಿಸುವುದು)	
3. ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರು	

ಮತ್ತು ಸದಸ್ಯರ ಹೆಸರು ಮತ್ತು ಪೂರ್ಣ ವಿಳಾಸ (ಮಾಹಿತಿ ಲಗತ್ತಿಸುವುದು)	
4. ಸಂಸ್ಥೆಯು ಸಮುದಾಯ ಭವನ/ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ ನಿವೇಶನ ಹೊಂದಿದೆಯೇ?	
5. ನಿವೇಶನದ ಅಳತೆ	
6. ನಿವೇಶನ ಸ್ವಂತದ್ದೇ ಅಥವಾ ಲೀಸ್‌ಗೆ ಪಡೆಯಲಾಗಿದೆಯೇ (ದಾಖಲಾತಿಗಳನ್ನು ಸಲ್ಲಿಸುವುದು)	
7. ನಿವೇಶನಕ್ಕೆ ಸಂಬಂಧಿಸಿದ ಋಣಭಾರ ಪ್ರಮಾಣ ಪತ್ರ ಲಗತ್ತಿಸಲಾಗಿದೆಯೇ?	
8. ಉದ್ದೇಶಿತ ಸಮುದಾಯ ಭವನದ/ವಿದ್ಯಾರ್ಥಿ ನಿಲಯದ ಕಟ್ಟಡ ಸ್ಥಳಾವಕಾಶದ ವಿವರಗಳು	
9. ಸಮುದಾಯ ಭವನದ/ವಿದ್ಯಾರ್ಥಿ ನಿಲಯದ ಕಟ್ಟಡ ನಕ್ಷೆ ಮತ್ತು ಅಂದಾಜುಗಳು ಲಗತ್ತಿಸಲಾಗಿದೆಯೇ? (ನಕ್ಷೆ ಮತ್ತು ಅಂದಾಜುಗಳು ಅಧಿಕೃತ ಅಭಿಯಂತರರಿಂದ ಅನುಮೋದಿಸಲ್ಪಟ್ಟಿರಬೇಕು)	
10. ಸಮುದಾಯ ಭವನ/ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಿಸಲು ಅಧಿಕೃತ ಪ್ರಾಧಿಕಾರದಿಂದ ಪರವಾನಗಿ ಪಡೆಯಲಾಗಿದೆಯೇ? (ಹಾಗಿದ್ದಲ್ಲಿ ಅಧಿಕೃತ ಪ್ರಾಧಿಕಾರದಿಂದ ಪಡೆದ ಪರವಾನಗಿ	
11. ಸಮುದಾಯ ಭವನ/ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣದ ಒಟ್ಟು ಅಂದಾಜು ವೆಚ್ಚ.	
12. ಸಮುದಾಯ ಭವನ/ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ ಸರ್ಕಾರದಿಂದ ಕೋರಲಾಗಿರುವ ಅನುದಾನದ ಮೊತ್ತ	
13. ಕಟ್ಟಡ ನಿರ್ಮಾಣದ ಒಟ್ಟು ವೆಚ್ಚದಲ್ಲಿ ಸರ್ಕಾರದ ಅನುದಾನ ಹೊರತು ಬಾಕಿ ಮೊತ್ತವನ್ನು ಭರಿಸುವ ಮೂಲಗಳ ವಿವರ.	

14. ಸಮುದಾಯ ಭವನವನ್ನು/ವಿದ್ಯಾರ್ಥಿ ನಿಲಯದ ಕಟ್ಟಡವನ್ನು ರಾಜಕೀಯ ಉದ್ದೇಶಗಳಿಗೆ ಬಳಸದೇ ಇರುವ ಬಗ್ಗೆ ಸಂಸ್ಥೆಯು ಪ್ರಮಾಣ ಪತ್ರ ನೀಡಿದೆಯೇ? (ಪ್ರತಿ ನೀಡುವುದು)	
15. ಸಂಸ್ಥೆಯು ವಾರ್ಷಿಕ ವರದಿಯನ್ನು ಲಗತ್ತಿಸಲಾಗಿದೆಯೇ?	
16. ಸಂಸ್ಥೆಯು ಹಣಕಾಸು ಸ್ಥಿತಿ ಬಗ್ಗೆ ಕಳೆದೆರಡು ವರ್ಷಗಳ ಆಡಿಟ್ ವರದಿಯ ಪ್ರತಿ ಲಗತ್ತಿಸಲಾಗಿದೆಯೇ?	

1. ಸಮುದಾಯ ಭವನ/ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಿಸುವ ಸಂಬಂಧ ಸರ್ಕಾರದ ಅನುದಾನ ಪಡೆಯುವ ಸಲುವಾಗಿ ಮೇಲೆ ತಿಳಿಸಿದ ಮಾಹಿತಿ / ವಿವರಗಳು ಸತ್ಯವಾಗಿರುತ್ತದೆಯೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.

2. ಸರ್ಕಾರದ ಅನುದಾನ ಪಡೆಯದೆ ನಿರ್ಮಿಸಲಾಗುವ ಸಮುದಾಯ ಭವನವನ್ನು/ವಿದ್ಯಾರ್ಥಿ ನಿಲಯದ ಕಟ್ಟಡ ನಿಗದಿತ ಉದ್ದೇಶಕ್ಕೆ ಉಪಯೋಗಿಸಲಾಗುವುದೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.

ಸಕಇ 84 ಬಿಎಂಎಸ್ 2009

(ಎಂ.ಎಂ.ಬಾಟೆ)
ಸರ್ಕಾರದ ಅಧೀನ ಕಾರ್ಯದರ್ಶಿ–3
ಸಮಾಜ ಕಲ್ಯಾಣ ಇಲಾಖೆ.

ಅನುಬಂಧ–ಆ

2008–09ನೇ ಸಾಲಿನಲ್ಲಿ ಉಪ್ಪಾರ ಸಮಾಜದ ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕೆ ಹಣ ಬಿಡುಗಡೆ ಮಾಡಬೇಕಾದ ಬಾಕಿ ಪ್ರಸ್ತಾವನೆಗಳು ಕುರಿತು.

ಕ್ರ.ಸಂ.	ಸಂಘದ ಹೆಸರು
1)	ಶ್ರೀ ಭಗೀರಥ ಉಪ್ಪಾರ ಸಂಘ, (ರಿ) ನಾಗಗೊಂಡನಹಳ್ಳಿ,ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ
2)	ಶ್ರೀ ಭಗೀರಥ ಉಪ್ಪಾರ ಸಂಘ, (ರಿ) ಕೋಡಿಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
3)	ಶ್ರೀ ಆಂಜನೇಯ ಸ್ವಾಮಿ ಭಗೀರಥ ಉಪ್ಪಾರ ಸಂಘ, (ರಿ),

	ಹೊಸನಾಯಕಹಳ್ಳಿ, ದಾವಣಗೆರೆ ಜಿಲ್ಲೆ.
4)	ಶ್ರೀ ಭಗೀರಥ ಉಪ್ಪಾರ ಸಮಾಜ ಸೇವಾ ಸಂಘ, ಜಂಬಗಿ, ಬಿಜಾಪುರ ಜಿಲ್ಲೆ
5)	ಶ್ರೀ ಭಗೀರಥ ಉಪ್ಪಾರ ಯುವಕ ಸಂಘ, (ರಿ) ಮಚ್ಚೇರಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ
6)	ಶ್ರೀ ಭಗೀರಥ ಉಪ್ಪಾರ ಟ್ರಸ್ಟ್ (ರಿ) ಅರಸೀಕೆರೆ ತಾಲ್ಲೂಕು, ಜಾಜೂರು ಗ್ರಾಮ, ಹಾಸನ ಜಿಲ್ಲೆ
7)	ಶ್ರೀ ಭಗೀರಥ ಯುವಕರ ಸಂಘ, (ರಿ) ಬಲ್ಲೇನಹಳ್ಳಿ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ
2008-09ನೇ ಸಾಲಿನಲ್ಲಿ ವಿವಿಧ ಸಮಾಜದ ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕೆ ಹಣ ಬಿಡುಗಡೆ ಮಾಡಬೇಕಾದ ಬಾಕಿ ಪ್ರಸ್ತಾವನೆಗಳು ಕುರಿತು	
1)	ಶ್ರೀ ಬೆಟ್ಟದಜ್ಜ ನಿಂಗಜ್ಜದೇವರ ದೇವಸ್ಥಾನ ಸೇವಾ ಸಮಿತಿ (ರಿ), ಗಜೇಂದ್ರಗಡ, ಗದಗ್. ಕುಂಬಾರ ಸಮಾಜದ ಅಭುವೃದ್ಧಿಗಾಗಿ ಭವನವನ್ನು ಕಟ್ಟಸಲು ಅನುದಾನವನ್ನು ಒದಗಿಸುವ ಕುರಿತು.
2)	ಶ್ರೀ ಬನಶಂಕರಿ ದೇವಾಂಗ ಸಂಘ (ರಿ) ನಿಡಘಟ್ಟ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
3)	ಶ್ರೀ ರಾಮಲಿಂಗ ಚೌಡೇಶ್ವರಿ ಕನ್ನಡ ದೇವಾಂಗ ಸೇವಾ ಭವನ ಸಮಿತಿ, ಬೆಂಗಳೂರು ನಗರ ಜಿಲ್ಲೆ.
4)	ಶ್ರೀ ಗುರುರುದ್ರಸ್ವಾಮಿ ಸೇವಾ ಸಂಘ (ರಿ) ಕಲ್ಲೂರು, ಗುಬ್ಬಿ ತಾಲ್ಲೂಕು ತುಮಕೂರು ಜಿಲ್ಲೆ. (ದೇವಾಂಗ)
5)	ಶ್ರೀ ಸಿದ್ದಲಿಂಗೇಶ್ವರ ದೇವಾಂಗ ಸಹಕಾರ ಉತ್ಪಾದಕ ಸಂಘ, ಶಿರೊರ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
6)	ಶ್ರೀ ಬನಶಂಕರಿ ದೇವಿ ಟ್ರಸ್ಟ್ ಕಮೀಟಿ, ಹುನ್ನೂರ ತಾಲ್ಲೂಕು, ಜಮಖಂಡಿ, ಬಾಗಲಕೋಟೆ ಜಿಲ್ಲೆ. (ದೇವಾಂಗ)
7)	ಗುಳೇದಗುಡ್ಡ ದೇವಾಂಗ ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
8)	ಶ್ರೀ ಬನಶಂಕರಿ ದೇವಸ್ಥಾನ ಟ್ರಸ್ಟ್ ಕಮಿಟಿ, ಹೊಸೂರ ತಾಲ್ಲೂಕು ಜಮಖಂಡಿ, ಬಾಗಲಕೋಟೆ ಜಿಲ್ಲೆ.
9)	ಶ್ರೀ ಬನಶಂಕರಿ ದೇವಸ್ಥಾನ ಟ್ರಸ್ಟ್ ಕಮಿಟಿ ಮಹಾಲಿಂಗಪುರ, ಮುದೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
10)	ದೇವಾಂಗ ಸಂಘ, ದೇವಾಂಗ ಸಮುದಾಯ, ಇಲಕಲ್ಲು, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
11)	ಶ್ರೀ ದೇವರ ದಾಸಿಮಯ್ಯ ಹಟಗಾರ ದೈವ ಮಂಡಳಿ, ಮಾಲಾಪುರ, ತಾಲ್ಲೂಕು ಮುಧೋಳ, ಬಾಗಲಕೋಟೆ ಜಿಲ್ಲೆ.

12)	ಶ್ರೀ ವೀರಭದ್ರೇಶ್ವರ ಮತ್ತು ಕಾಳಿಕಾದೇವಿ ಟ್ರಸ್ಟ್ ಕಮಿಟಿ ಹುಳ್ಳಾಳ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ವಿವಿಧ ಸಮುದಾಯಗಳ ಸಮುದಾಯ ಭವನ ನಿರ್ಮಾಣ

ಶಿವಮೊಗ್ಗ ಜಿಲ್ಲೆ:–		
1)	ಶಿವಮೊಗ್ಗ ನಗರದಲ್ಲಿ ಹೊಸದಾಗಿ ಕಟ್ಟುತ್ತಿರುವ ಆರ್ಯ ಈಡಿಗರ ವಿದ್ಯಾರ್ಥಿ ನಿಲಯದ ಕಾಮಗಾರಿಗೆ	ರೂ.33.33 ಲಕ್ಷಗಳು
2)	ಭದ್ರಾವತಿ ನಗರದ ಮರಾಠ ಸಮುದಾಯ ಭವನಕ್ಕೆ	ರೂ.8.34 ಲಕ್ಷಗಳು
	ಒಟ್ಟು	**ರೂ.41.67 ಲಕ್ಷಗಳು**
ದಾವಣಗೆರೆ ಜಿಲ್ಲೆ:–		
1)	ದಾವಣಗೆರೆಯ ಹೊದಿಗೆರೆ ಗ್ರಾಮದ ಶ್ರೀ ಶಹಾಜಿರಾಜ್ ಬೋಂಸ್ಲೇ ರಾಷ್ಟ್ರೀಯ ಸ್ಮಾರಕದ ಅಭಿವೃದ್ಧಿಗಾಗಿ	ರೂ.33.33 ಲಕ್ಷಗಳು
ಕೋಲಾರ ಜಿಲ್ಲೆ:–		
1)	ಜಿಲ್ಲಾ ಕುಂಬಾರರ ಸಂಘ, ಕೀಲುಕೋಟೆ, ಕೋಲಾರ	ರೂ.5.00 ಲಕ್ಷ
ಮಂಡ್ಯ ಜಿಲ್ಲೆ:–		
1)	ಬಸವ ಸಮಿತಿ, ಸಿಂಧಘಟ್ಟ ಗ್ರಾಮ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ	ರೂ.10.00 ಲಕ್ಷಗಳು
ಚಿತ್ರದುರ್ಗ ಜಿಲ್ಲೆ:–		
1)	ಮರಾಠ ಕ್ಷತ್ರಿಯ ಸಮುದಾಯ ಭವನ ನಿರ್ಮಾಣಕ್ಕೆ	5.00
2)	ಕುಂಚಿಟಿಗರ ಸಮುದಾಯಭವನ/ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ನಿರ್ಮಾಣಕ್ಕಾಗಿ	10.00
3)	ಮಡಿವಾಳ ಸಮಾಜದ ಸಮುದಾಯ ಭವನ ನಿರ್ಮಾಣಕ್ಕಾಗಿ	5.00
4)	ಆರ್ಯ ಈಡಿಗ ಸಮುದಾಯ ಭವನ/ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ನಿರ್ಮಾಣಕ್ಕಾಗಿ	5.00
5)	ಬಲಿಜ ಅಭಿವೃದ್ಧಿಗೆ ಸಮುದಾಯ	10.00

	ಭವನ/ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ನಿರ್ಮಾಣಕ್ಕಾಗಿ	
6)	ಹಳ್ಳಿಕಾರ ಜನಾಂಗದ ಅಭಿವೃದ್ಧಿಗೆ ಸಮುದಾಯ ಭವನ/ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ನಿರ್ಮಾಣಕ್ಕಾಗಿ	10.00
7)	ವಿಶ್ವ ಕರ್ಮ ಸಮುದಾಯದ ಅಭಿವೃದ್ಧಿಗೆ ಸಮುದಾಯ ಭವನ/ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ನಿರ್ಮಾಣಕ್ಕಾಗಿ	10.00
8)	ಕನಕ ಭವನ ಸಮುದಾಯ ಭವನ/ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ನಿರ್ಮಾಣಕ್ಕಾಗಿ	5.00
9)	ದೇವಾಂಗ ಸಮಾಜದ ವಿದ್ಯಾರ್ಥಿ ನಿಲಯ/ಸಮುದಾಯ ಭವನದ ಕಟ್ಟಡ ನಿರ್ಮಾಣಕ್ಕಾಗಿ	10.00
	ಒಟ್ಟು	**70.00**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

2008–09ನೇ ಸಾಲಿನಲ್ಲಿ ಸವಿತಾ ಸಮಾಜದ ಅಭಿವೃದ್ಧಿ ಕಾರ್ಯಕ್ರಮದಡಿ ಸಮುದಾಯ ಭವನಗಳಿಗೆ ಹಣ ಬಿಡುಗಡೆ ಮಾಡಿರುವ ವಿವರ

ರೂ.ಲಕ್ಷಗಳಲ್ಲಿ

ಕ್ರ.ಸಂ.	ಸಂಘದ ಹೆಸರು	ಬಿಡುಗಡೆ ಮಾಡಿರುವ ಮೊತ್ತ
1)	ಜಿಲ್ಲಾ ಸವಿತಾ ಸಮಾಜ ಗುಲ್ಬರ್ಗಾ, ಗುಲ್ಬರ್ಗಾ ಜಿಲ್ಲೆ	5.00
2)	ಸವಿತಾ ಸಮಾಜ ಹಡಪದ ವಿವಿದೋದ್ದೇಶಗಳ ಸಹಕಾರಿ ಸಂಘ ನಿಯಮಿತ ಇಂಡಿ, ಬಿಜಾಪುರ ಜಿಲ್ಲೆ	5.00
3)	ಜಿಲ್ಲಾ ಸವಿತಾ ಸಮಾಜ ಉಡುಪಿ, ಉಡುಪಿ ಜಿಲ್ಲೆ	5.00
4)	ಭದ್ರಾವತಿ ತಾಲ್ಲೂಕು ಸವಿತಾ ಸಮಾಜ ಶಿವಮೊಗ್ಗ ಜಿಲ್ಲೆ	5.00
5)	ಸವಿತಾ ಸಮಾಜ ಕೋಣಂದೂರು, ತೀರ್ಥಹಳ್ಳಿ (ತಾಲ್ಲೂಕು) ಶಿವಮೊಗ್ಗ ಜಿಲ್ಲೆ	5.00

6)	ಮೈಸೂರು ಜಿಲ್ಲಾ ಸವಿತಾ ಸಮಾಜ, ಮೈಸೂರು (ವಿದ್ಯಾರ್ಥಿ ನಿಲಯಕ್ಕೆ)	5.00
7)	ಭಜಂತ್ರಿ ಸವಿತಾ ಸಂಘ, ಶ್ರವಣಬೆಳಗೊಳ ಚನ್ನರಾಯ ಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ	5.00
8)	ಮಹಾ ಶರಣ ಹಡಪದ ಅಪ್ಪಣ್ಣ ಸಂಘ, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ	5.00
9)	ಸವಿತಾ ಸಮಾಜ ತರುಣ ಸಂಘ, ಗೋಗಿ, ಶಹಾಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ	5.00
10)	ಸವಿತಾ ಸಮಾಜ ವಿವಿದೋದ್ದೇಶ ಸಹಕಾರ ಸಂಘ ಕೊಪ್ಪಳ, ಕೊಪ್ಪಳ ಜಿಲ್ಲೆ	5.00
11)	ಸವಿತಾ ಸಮಾಜ (ರಿ) ಮಹದೇಶ್ವರ ಬ್ಲಾಕ್ ಸೋಮವಾರಪೇಟೆ, ಕೊಡಗು ಜಿಲ್ಲೆ.	2.50
12)	ಹಿಂದೂ ಸವಿತಾ ಸಮಾಜ ಶ್ರೀ ವೆಂಕಟೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿ, ಬೆಟಗೇರಿ, ಗದಗ್ ತಾಲ್ಲೂಕು, ಗದಗ್ ಜಿಲ್ಲೆ.	5.00
13)	ಸವಿತಾ ಸಮಾಜ (ರಿ) ವಿರೂಪಾಕ್ಷಿ ಅವಣಿ ಹೋಬಳಿ, ಮುಳಬಾಗಿಲು (ತಾ) ಕೋಲಾರ ಜಿಲ್ಲೆ.	5.00
14)	ಹಿರಿಯೂರು ಸವಿತಾ ಸಮಾಜ, ಚಿತ್ರದುರ್ಗ ಜಿಲ್ಲೆ	5.00
	ಒಟ್ಟು	**67.50**

ಅನುಬಂಧ–ಇ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

2008–09ನೇ ಸಾಲಿನಲ್ಲಿ ಉಪ್ಪಾರ ಸಮಾಜದ ಅಭಿವೃದ್ಧಿ ಕಾರ್ಯಕ್ರಮದಡಿ ಸಮುದಾಯ ಭವನಗಳಿಗೆ ಹಣ ಬಿಡುಗಡೆ ಮಾಡಿರುವ ಕುರಿತು

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ಸಂಘದ ಹೆಸರು	ಬಿಡುಗಡೆ ಮಾಡಿರುವ ಮೊತ್ತ
1)	ಶ್ರೀ ಭಗೀರಥ ಉಪ್ಪಾರ ಸಂಘ, ಚೌಡ್ಲಾಪುರ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ	5.00
2)	ಶ್ರೀ ಭಗೀರಥ ಯುವಕ ಸಂಘ, ಕತ್ತಿ ಮಲ್ಲೇನಹಳ್ಳಿ, ಅರಕಲಗೂಡು ತಾಲ್ಲೂಕು ಹಾಸನ ಜಿಲ್ಲೆ	5.00

3)	ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನ ಮತ್ತು ಉಪ್ಪಾರ ಶೆಟ್ಟರ ಸಂಘ (ರಿ) ಮೈಸೂರು ಜಿಲ್ಲೆ, ಮೈಸೂರು.	5.00
4)	ಶ್ರೀ ಭಗೀರಥ ಉಪ್ಪಾರ ಕ್ಷೇಮಾಭಿವೃದ್ಧಿ ಸಂಸ್ಥೆ , ತಡವಲಗಾ ಇಂಡಿ (ತಾ), ಬಿಜಾಪುರ ಜಿಲ್ಲೆ	5.00
5)	ಶ್ರೀ ಚೌಡೇಶ್ವರಿ ಮತ್ತು ಶ್ರೀ ಲಕ್ಷ್ಮಿದೇವಿ ಅಮ್ಮನವರ ಸೇವಾ ಸಮಿತಿ ದುದ್ದ ಗ್ರಾಮ, ಮಂಡ್ಯ ಜಿಲ್ಲೆ. (2007–08ನೇ ಸಾಲಿನದು)	5.00
6)	ಭಗೀರಥ ಉಪ್ಪಾರ ಟ್ರಸ್ಟ್, ಪಿರಿಯಾ ಪಟ್ಟಣ, ಮೈಸೂರು ಜಿಲ್ಲೆ	5.00
7)	ಶಿವಮೊಗ್ಗ ಜಿಲ್ಲಾ ಉಪ್ಪಾರ ಸಂಘ, ಶಿವಮೊಗ್ಗ	5.00
8)	ಸಾಗರವಂಶ ಮೇಲು ಸಕ್ಕರೆ ಉಪ್ಪಾರ ಸಂಘ, ಕೆ.ಆರ್.ನಗರ ಮೈಸೂರು ಜಿಲ್ಲೆ	5.00
9)	ಉಪ್ಪಾರ ಸಮಾಜ, ತಾನರಗೇರಾ, ಕೊಪ್ಪಳ ಜಿಲ್ಲೆ	5.00
10)	ಭಗೀರಥ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಜಗದಾಳ, ಜಮಖಿಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ. (ಬಿಡುಗಡೆ ಮಾಡಿಲ್ಲ)	5.00
11)	ಭಗೀರಥ ಉಪ್ಪಾರ ಸಮಾಜ, ಮಾರಶೆಟ್ಟಿಹಳ್ಳಿ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ	5.00
12)	ಉಪ್ಪಾರ ಸಂಘ, ಉಪ್ಪಾರ ಬಈದಿ, ಹಳೇ ನಗರ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.	5.00
13)	ಶ್ರೀ ಭಗೀರಥ ಉಪ್ಪಾರ ಸಂಘ, ನಾರಾಯಣ ಪುರ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.	5.00
14)	ಶ್ರೀ ಭಗೀರಥ ಉಪ್ಪಾರ ಸಂಘ, ಬಸರಗಿ ಇನಾಮ್, ಸವದತ್ತಿ ತಾಲ್ಲೂಕು, ಬೆಳಗಾಂ ಜಿಲ್ಲೆ.	5.00
15)	ಶ್ರೀ ಭಗೀರತ ಉಪ್ಪಾರ ಸಂಘ, ತಿಪ್ಪೂರ, ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ.	5.00
16)	ಮಸಿಯಾಂಬಿಕಾದೇವಿ, ಭೂದಾಳ ಸಹೋದರ/ಸಹೋದರಿಯರ ಸಂಘ,ಹದಡಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ.	5.00
17)	ಶ್ರೀ ಮಹರ್ಷಿ ಭಗೀರಥ ಉಪ್ಪಾರ ಸೇವಾ ಸಂಘ, ತೊದಲಬಾಗಿ, ಜಮಖಿಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ	5.00

	ಒಟ್ಟು	**85.00**

2008–09ನೇ ಸಾಲಿನಲ್ಲಿ ಉಪ್ಪಾರ ಸಮಾಜದ ಅಭಿವೃದ್ಧಿ ಕಾರ್ಯಕ್ರಮದಡಿ ವಿದ್ಯಾರ್ಥಿ ನಿಲಯ

ಕಟ್ಟಡ ನಿರ್ಮಾಣಕ್ಕಾಗಿ ಹಣ ಬಿಡುಗಡೆ ಮಾಡಿರುವ ಕುರಿತು

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ಸಂಘದ ಹೆಸರು	ಬಿಡುಗಡೆ ಮಾಡಿರುವ ಮೊತ್ತ
1)	ತುಮಕೂರು ಜಿಲ್ಲಾ ಭಗೀರಥ ಉಪ್ಪಾರ ಮಹಾ ಸಂಘ, ಶ್ರೀ ರಾಮನಗರ, ತುಮಕೂರು ಜಿಲ್ಲೆ	5.00
2)	ಶ್ರೀ ಭಗೀರಥ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ) ಜಗದಾಳ್, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ	5.00
3)	ಹಿರಿಯೂರು ಉಪ್ಪಾರ ಸಮಾಜ, ಹಿರಿಯೂರು, ಚಿತ್ರದುರ್ಗ ಜಿಲ್ಲೆ	5.00
	ಒಟ್ಟು	**15.00ಲಕ್ಷಗಳು**

ದೇವಾಂಗ ಸಮಾಜದ ಸಮುದಾಯ ಭವನ ನಿರ್ಮಾಣ

ಕ್ರ.ಸಂ	ಸಂಘದ ಹೆಸರು ಮತ್ತು ಸ್ಥಳ	ಅಂದಾಜು ವೆಚ್ಚ	ಮಂಜೂರು ಮಾಡಿದ ಮೊತ್ತ
1)	ಶ್ರೀ ರಾಮಾಂಜನೇಯ ಸ್ವಾಮಿ ದೇವಸ್ಥಾನ ಟ್ರಸ್ಟ್, ಲಿಂಗದಹಳ್ಳಿ, ತರಿಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ	20.00	5.00
2)	ಶ್ರೀ ಬನಶಂಕರಿ ದೇವಿ ಟ್ರಸ್ಟ್, ಶಿರೋಳ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ	11.45	5.00
3)	ದೇವಾಂಗ ಸಮಾಜ, ವಸಂತಪುರ, ಬೆಂಗಳೂರು ನಗರ	124.17	5.00
4)	ಶ್ರೀ ಬನಶಂಕರಿದೇವಿ ಟ್ರಸ್ಟ್, ಸಿದ್ದಾಪುರ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ	11.76	5.00
5)	ಶ್ರೀ ರಾಮ ಲಿಂಗ ಚೌಡೇಶ್ವರಿ ದೇವಾಂಗ	12.00	5.00

	ಸಂಘ, ಕೊಡ್ಲಿಪೇಟೆ, ಸೋಮವಾರ ಪೇಟೆ ತಾಲ್ಲೂಕು, ಕೊಡಗು ಜಿಲ್ಲೆ		
	ಒಟ್ಟು		**25.00**

ಕರ್ನಾಟಕ ವಿಧಾನಸಭೆ

376 ಶ್ರೀ. ಈಶ್ವರ್ ಭೀಮಣ್ಣ ಖಂಡ್ರೆ (ಬಾಲ್ಕಿ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅ) ರಾಜ್ಯದಲ್ಲಿ "ಆರೋಗ್ಯ ಕವಚ" ಮತ್ತು "ತಾಯಿ ಭಾಗ್ಯ" ಯೋಜನೆಯನ್ನು ಎಂದಿನಿಂದ ಜಾರಿಗೆ ತರಲಾಗಿದೆ? ಈ ಯೋಜನೆಯ ವಿಶೇಷಗಳೇನು? ಈ ಯೋಜನೆಯ ಲಾಭ ಪಡೆಯಲು ಯಾವ ಮಾನದಂಡಗಳನ್ನು ರೂಪಿಸಲಾಗಿದೆ?

ರಾಜ್ಯದಲ್ಲಿ ಆರೋಗ್ಯ ಕವಚ ಯೋಜನೆಯನ್ನು ದಿನಾಂಕ:1/11/08 ರಿಂದ ಜಾರಿಗೆ ತರಲಾಗಿದೆ. ಹಾಗೂ ತಾಯಿ ಭಾಗ್ಯ ಯೋಜನೆಯನ್ನು 10/10/2008 ರಿಂದ ಜಾರಿಗೆ ತರಲಾಗಿದೆ.

ಆರೋಗ್ಯ ಕವಚ ಯೋಜನೆಯ ವಿವರಗಳು:

ಯಾವುದೇ ತುರ್ತು ಕರೆಗಳನ್ನು ಮೊಬೈಲ್ ಅಥವಾ ನೇರ ದೂರವಾಣಿ ಮೂಲಕ 108 ಸಂಖ್ಯೆಗೆ ಮಾಡಿದಲ್ಲಿ ಅದು ಅಪಘಾತ, ಹಾವು ಕಡಿತ, ಗರ್ಭಿಣಿ ಪ್ರಕರಣಗಳು ಇತ್ಯಾದಿ ವೈದ್ಯಕೀಯಕ್ಕೆ ಸಂಬಂಧಿಸಿದವೂ ಅಲ್ಲದೆ, ಪೋಲಿಸ್ ಮತ್ತು ಅಗ್ನಿಶಾಮಕಕ್ಕೆ ಸಂಬಂಧಿಸಿದ ಯಾವುದೇ ಕರೆ ಇದ್ದರೂ ಸ್ವೀಕರಿಸಿ ಆಂಬುಲೆನ್ಸಗಳನ್ನು ತುರ್ತು ಸ್ಥಳಕ್ಕೆ ತಲುಪಲು ವ್ಯವಸ್ಥೆ ಮಾಡಲಾಗುತ್ತದೆ. ಆಧುನಿಕ ಉಪಕರಣಗಳನ್ನೊಳಗೊಂಡ ಸುಸಜ್ಜಿತವಾದ ಆಂಬುಲೆನ್ಸ್‌ನಲ್ಲಿ ತರಬೇತಿ ಪಡೆದ ಅರೆ ವೈದ್ಯಕೀಯ ಸಿಬ್ಬಂದಿ ತುರ್ತು ಘಟನೆ ಸ್ಥಳದಲ್ಲಿ ರೋಗಿಗೆ ಚಿಕಿತ್ಸೆ ನೀಡುವ ಮೂಲಕ ಆರೋಗ್ಯವನ್ನು ಸುಧಾರಿಸಿ ತಕ್ಷಣ ಆಸ್ಪತ್ರೆಗೆ ಸೇರಿಸುವ ವ್ಯವಸ್ಥೆ ಮಾಡಲಾಗುತ್ತದೆ. ಮೊದಲ 24 ಘಂಟೆಗಳ ಸೇವೆಯು ಈ ಯೋಜನೆಯಡಿ ಉಚಿತವಾಗಿದೆ. ಹಾಗೂ ರಾಜ್ಯದ ಎಲ್ಲಾ ವರ್ಗದ ಜನರು ಈ ಸೌಲಭ್ಯವನ್ನು ಪಡೆಯಬಹುದಾಗಿದೆ.

ತಾಯಿ ಭಾಗ್ಯ ಯೋಜನೆಯ ವಿವರಗಳು:

ಆಸ್ಪತ್ರೆಗಳಲ್ಲಿ ಹೆರಿಗೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ತಾಯಿ ಭಾಗ್ಯ ಎಂಬ ಸಮಗ್ರ ತಾಯಂದಿರ ಆರೋಗ್ಯ ನಿರ್ವಹಣೆ ಯೋಜನೆಯನ್ನು ಅಸ್ತಿತ್ವದಲ್ಲಿದ್ದ ಮಡಿಲು, ಪ್ರಸೂತಿ ಆರೈಕೆ, ಜನನಿ ಸುರಕ್ಷಾ ಯೋಜನೆಗಳ ಜೊತೆಗೆ ತಾಯಿ ಭಾಗ್ಯ ಎಂಬ ಹೊಸ ಕಾಂಪೊನೆಂಟ್ ಸೇರಿಸಿ ಪ್ರಸ್ತುತ ಸಾಲಿನಿಂದ ದಿನಾಂಕ 10–10–2008 ರಿಂದ ಜಾರಿಗೊಳಿಸಲಾಗಿದೆ. ತಾಯಿ ಭಾಗ್ಯ ಎಂಬ ಹೊಸ ಕಾಂಪೊನೆಂಟ್ ಅಡಿಯಲ್ಲಿ ಖಾಸಗಿ ಸೇವೆ ಒದಗಿಸುವವರು ಪ್ರತಿ 100 ಹೆರಿಗೆಗಳನ್ನು ಮಾಡಿಸಿದಲ್ಲಿ ರೂ. 3 ಲಕ್ಷಗಳ ಉತ್ತೇಜಿತ ಹಣವನ್ನು ಪಡೆಯುತ್ತಾರೆ. ಈ ಹೊಸ ಕಾಂಪೊನೆಂಟ್ ರಾಜ್ಯ 6–ಸಿ ವರ್ಗದ ಜಿಲ್ಲೆಗಳು ಅಂದರೆ ಬೀದರ್, ಗುಲ್ಬರ್ಗಾ, ಬಿಜಾಪುರ,